**ಸಾಕ್ಷಿಯನ್ನು ಇಂದು ದಿನಾಂಕಃ 13-11-2019 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ-ಪ್ರತಿವಾದಿ ಪರ ಶ್ರೀ ಎಸ.ಎ.ಪಿ. ವಕೀಲರಿಂದಃ**

ನಾನು ವಾಸವಿರುವ ಮನೆಯನ್ನು ರಜಾಕಸಾಬ ಖಾಜಿಯವರಿಂದ ನಮ್ಮ ತಂದೆಯವರ ಹೆಸರಿನಲ್ಲಿ ಖರೀದಿ ಮಾಡಿದ್ದೆವೆ. ಸದರಿ ಮನೆಯನ್ನು ಖರೀದಿಸಿ 40-45 ವರ್ಷಗಳು ಆಗಿರಬಹುದು. ಪೂರ್ವ – ಪಶ್ಚಿಮ 55 ಅಡಿ ಮತ್ತು ಉತ್ತರ – ದಕ್ಷಿಣ 62 ಅಥವಾ 65 ಅಡಿ ಜಾಗವನ್ನು ಖರೀದಿ ಮಾಡಿದ್ದೆವು. ನಾವು ಖರೀದಿ ಮಾಡಿದಾಗ ಜಾಗದ ಚಕ್ಕು ಬಂದಿ ಏನು ಇತ್ತು ಎಂದು ಗೊತ್ತಿಲ್ಲ. ಈಗ ಪೂರ್ವಕ್ಕೆ ಸತೀಶ ಕಟಂಬಳೆ ಇವರ ಮನೆ ಇದೆ. ನಾವು ಖರೀದಿ ಮಾಡುವಾಗ ನಮ್ಮ ಜಾಗದ ಪಶ್ಚಿಮಕ್ಕೆ ರಜಾಕಸಾಬ ಖಾಜಿಯವರ ಇವರ ಜಾಗ ಇತ್ತು ಈಗ ಅವರು ಮಾರಾಟ ಮಾಡಿದ್ದಾರೆ. ಈಗ ನಮ್ಮ ಜಾಗದ ಪಶ್ಚಿಮಕ್ಕೆ ನಜೀರ, ಅಲ್ಲಾಬಕ್ಷ, ಉಮರಅಲಿ ಇವರ ಮನೆ ಇದೆ. ನಾವು ಖರೀದಿ ಮಾಡುವಾಗ ನಮ್ಮ ಜಾಗದ ಉತ್ತರಕ್ಕೆ ಯಾರು ಇದ್ದರು ಎಂದು ಗೊತ್ತಿಲ್ಲ. ಈಗ ಡಾಃಬಾಳು ಇವರ ಮನೆ ಇದೆ. ನಾವು ಖರೀದಿ ಮಾಡುವಾಗ ನಮ್ಮ ಜಾಗದ ದಕ್ಷಿಣಕ್ಕೆ ಪ್ರತಿವಾದಿ ತಾಯಿ ರಶೀದಾಬೇಗಂ ಇದ್ದಳು ಈಗ ಪ್ರತಿವಾದಿ ರಿಜ್ವಾನಬೇಗಂ ಇದ್ದಾಳೆ ಎಂದು ಸಾಕ್ಷಿ ನುಡಿಯುತ್ತಾರೆ.

ನಾವು ಖರೀದಿ ಮಾಡುವಾಗ ಖರೀದಿ ಮಾಡಿದ ಜಾಗದ 4 ಕಡೆ ಗೋಡೆಗಳು ಇದ್ದವು ಸ್ವಲ್ಪ ಭಾಗದಲ್ಲಿ ಪತ್ರಾಶೆಡ್ಡು ಹಾಕಿತ್ತು. ಸದರಿ ಪತ್ರಾವು ಜಾಗದ ಮಧ್ಯದಲ್ಲಿ ಇತ್ತು ಪತ್ರಾವು 20x20 ಅಡಿ ಇತ್ತು ಬೇರೆ ಜಾಗವು ಖುಲ್ಲಾ ಜಾಗವಾಗಿತ್ತು. ಖರೀದಿ ಮಾಡಿದ ನಂತರ ನಾವು ನಮ್ಮ ಜಾಗದಲ್ಲಿ ಉತ್ತರ ದಿಕ್ಕಿಗೆ 2 ಕೋಣೆಗಳನ್ನು ಕಟ್ಟಿರುತ್ತೆವೆ. ಸದರಿ 2 ಕೋಣೆಗಳನ್ನು ಕಟ್ಟಲು ಮುನ್ಸಿಪಾಲಿಟಿಯಿಂದ ಪರವಾನಗಿ ಪಡೆದಿದ್ದೆವೆ. ಸದರಿ ಪರವಾನಗಿಯನ್ನು ದಾವಾ ಹೂಡುವಾಗ ವಕೀಲರಿಗೆ ನೀಡಿದ್ದೆನೆ.

ನನಗೆ ಒಬ್ಬ ಸಹೋದರ ನಬೀಲಾಲ ಇದ್ದನು ಎಂದರೆ ಸರಿ. ಆತ ಈಗ 8 ವರ್ಷಗಳ ಹಿಂದೆ ತೀರಿಕೊಂಡಿದ್ದಾನೆ ಎಂದರೆ ಸರಿ. ಆಕೆಯ ಹೆಂಡತಿ ಕರೀಮಾ ಜೀವಂತ ಇದ್ದಾಳೆ ಎಂದರೆ ಸರಿ. ನಬೀಲಾಲ ಇತನಿಗೆ ಶಬಾನಾ, ಇರ್ಫಾನಾ, ಆಫರೀನ, ಸಲಮಾ ಎಂಬ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಹೈದರ ಮತ್ತು ರೆಹಮಾನ ಎಂಬ ಗಂಡು ಮಕ್ಕಳು ಸಹ ಇದ್ದಾರೆ ಎಂದರೆ ಸರಿ. ಈ ದಾವೆಯ ಬಗ್ಗೆ ಮೇಲೆ ಹೇಳಿದವರಿಗೆ ವಿಷಯ ತಿಳಿಸಿರುತ್ತೆನೆ. ನಬೀಲಾಲ ಎಂಬ ಸಹೋದರನ ಬಗ್ಗೆ ನನ್ನ ವಕೀಲರಿಗೆ ನಾನು ವಿಷಯ ತಿಳಿಸಿದ್ದೆನೆ.

ನಮ್ಮ ಜಾಗದ ಉತ್ತರಕ್ಕೆ 6 ಅಡಿ ಸಂದಿ ಇದೆ ಎಂದರೆ ಸರಿ. ಸದರಿ 6 ಅಡಿ ಸಂದಿ ನಂತರ ನೇಮಿನಾಥ ಸಸತ್ತೂರೆ ಇವರ ಮನೆ ಇದೆ ಎಂದರೆ ಸರಿ. ನನ್ನ ಮನೆಯ ಪೂರ್ವಕ್ಕೆ ರಾಹುಲ ಕಟಂಬಳೆ ಇವರ ಮನೆ ಬರುತ್ತದೆ. ರಾಹುಲ

ಕಟಂಬಳೆ ಇವರ ಉತ್ತರಕ್ಕೆ 6 ಅಡಿ ಸಂದಿ ಇದೆ ಎಂದರೆ ಸರಿ. ನೇಮಿನಾಥ ಸಸತ್ತೂರೆ ಇವರ ಮನೆಯ ನಂತರ ರಸ್ತೆ ಬರುತ್ತದೆ. ನನ್ನ ಮನೆ ಆದ ನಂತರ ಕಟಂಬಳೆ ರವರ ಮನೆ ಬರುತ್ತದೆ ಆ ನಂತರ ಸರ್ಕಾರಿ ರಸ್ತೆ ಬರುತ್ತದೆ. ಸದರಿ ರಸ್ತೆಯು ಕಟಂಬಳೆ ಮತ್ತು ನೇಮಿನಾಥ ಸಸತ್ತೂರೆ ಇವರ ಮನೆಯ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ನನ್ನ, ಕಟಂಬಳೆ ಮತ್ತು ನೇಮಿನಾಥ ಸಸತ್ತೂರೆ ಇವರ ಮನೆಯ ನೀರು 6 ಅಡಿ ಸಂದಿಯಲ್ಲಿ ಹೊಗುತ್ತವೆ ಎಂದರೆ ಸರ್ಕಾರಿ ರಸ್ತೆಗೆ ಹೊಗುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸಮಯವಕಾಶ ಕೋರಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.